ಅ) ಬಸವನ ಬಾಗೇವಾಡಿ ಕ್ಷೇತ್ರದಲ್ಲಿನ ಮುಳವಾಡ ಏತ ನೀರಾವರಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಯಾವ ಯಾವ ಪ್ರಮುಖ ರಸ್ತೆಗಳನ್ನು ಸುಧಾರಿಸಲು ನಿರ್ಧರಿಸಲಾಗಿದೆ?

ಆ) ಈ ಎಲ್ಲಾ ರಸ್ತೆಗಳನ್ನು ಹಾಗೂ ರಾಷ್ಟ್ರೀಯ ಹೆದ್ದಾರಿ 13ರ ರಸ್ತೆಯ ಸುಧಾರಣೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಮಾಡಿಸುವ ಯೋಜನೆ ಸರ್ಕಾರದಲ್ಲಿದೆಯೇ?

ಇ) ಆ ರೀತಿ ಯಾವ ಯಾವ ರಸ್ತೆಗಳನ್ನು ಗುರುತಿಸಲಾಗಿದೆ: ವಿವರ ನೀಡುವುದು ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಮುಳವಾಡ ಏತ ನೀರಾವರಿ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯಲ್ಲಿನ ರಾಷ್ಟ್ರೀಯ ಹೆದ್ದಾರಿ 13ರ ಮುತ್ತಗಿ ಕ್ರಾಸ್ನಿಂದ ಕೊಲ್ಹಾರದವರೆಗೆ 23 ಕಿ.ಮೀ. ಉದ್ದ ರಸ್ತೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮದಡಿಯಲ್ಲಿ ಸುಧಾರಣೆ ಮಾಡಲಾಗುತ್ತದೆ.

ಆ) ಇಲ್ಲ. ಇಂತಹ ಯಾವ ಯೋಜನೆಯೂ ಸರ್ಕಾರದ ಮುಂದಿಲ್ಲ.

ಇ) ಮುತ್ತಗಿ ಕ್ರಾಸ್ನಿಂದ ಕೊಲ್ಹಾರದವರೆಗೆ 23 ಕಿ.ಮೀ. ಉದ್ದದ ರಸ್ತೆಯನ್ನು ಹೊರತುಪಡಿಸಿ, ಕೃಷ್ಣಾ ಭಾಗ್ಯ ಜಲ ನಿಗಮದಿಂದ ಬೇರಾವುದೇ ರಸ್ತೆ ಸುಧಾರಣೆ ಕಾರ್ಯವನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇರುವುದಿಲ್ಲ.

ಕೊರಟಗೆರೆ ಕ್ಷೇತ್ರದಲ್ಲಿ ಭೂಸಾರ ಸಂರಕ್ಷಣೆ ಕಾಮಗಾರಿಗಳು

690(842) : ಶ್ರೀ ಚನ್ನಿಗಪ್ಪ. ಸಿ (ಕೊರಟಗೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ 1999-2000ನೇ ಸಾಲಿನಿಂದ ಈವರೆಗೆ ಗಿರಿಜನ ಉಪ ಯೋಜನೆ, ಬಯಲು ಸೀಮೆ ಅಭಿವೃದ್ಧಿ ಯೋಜನೆ, ಡಿಪಿಎಪಿ ಯೋಜನೆ ಮುಂತಾದ ಯೋಜನೆಗಳಲ್ಲಿ ಕೈಗೊಂಡಿರುವ ಭೂಸಾರ ಸಂರಕ್ಷಣೆ ಕಾಮಗಾರಿಗಳು ಯಾವುವು? ಇವುಗಳಿಗೆ ಎಷ್ಟು ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ, ಕಾಮಗಾರಿಗಳ ವಿವರ ನೀಡುವುದು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :

1) ಕೊರಟಗೆರೆ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗಿರಿಜನ ಉಪ ಯೋಜನೆ ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ, ಉದ್ಯೋಗ ಭರವಸೆ ಯೋಜನೆ ವಿಶೇಷ ಘಟಕ ಯೋಜನೆ, ಕೂಲಿಗಾಗಿ ಕಾಳು ಯೋಜನೆ ಹಾಗೂ ರಾಷ್ಟ್ರೀಯ ಜಲಾನಯನ ಅಬಿವೃದ್ಧಿ ಯೋಜನೆಗಳಡಿಯಲ್ಲಿ ಒಟ್ಟಾರೆ ರೂ. 164.01 ಲಕ್ಷಗಳು ಮಂಜೂರಾಗಿದ್ದು, ಇದರಲ್ಲಿ ರೂ. 163.757 ಲಕ್ಷ ವೆಚ್ಚ ಮಾಡಲಾಗದೆ. ಯೋಜನೆವಾರು ಮತ್ತು ಕಾಮಗಾರಿ ವಿವರಗಳನ್ನು ಅನುಬಂಧ ದಲ್ಲಿ ನೀಡಲಾಗಿದೆ.

Annexure

Sl. No.	Scheme	Name of the work	Amount sanctioned (Rs. in lakhs)	Expenditure (Rs.in lakhs)
1.	Trible sub plan	Rubble checks two Nos.	0.072	0.072
2.	Integrated wasteland development project	Check dams two Nos. and Raising of 4000 Forestry seedlings.	2.347	2.347
3.	D.P.A.P.	Check dams and Nala bund 16 Nos. Rubble Checks and boulder checks. Nala revetment 19 Nos. Raising of forestry seedlings.	30.571	30.571
4.	Employment assurance scheme	Check dam, Rubble check and Boulder check 31 Nos. Planting of forestry & horticultureal plants.	44.98	44.98
5.	Special Component plan	Check dam 2 Nos. & Land levelling.	1.50	1.50
6.	Food for work scheme	Raising of forestry seedlings.	1.00	0.747
7.	National Watershed Development Project for rainfed areas.	Water harvesting structures like, Check dam, RRS & Nala bund 10 Nos. rubble check, Boulder check, Earthern check, Nala revetment and Gokattes. Raising of forestry seedlings.	83.54	83.54
Total			**164.01**	**163.757**

ಮಾಗಡಿ ಕ್ಷೇತ್ರದಲ್ಲಿ ಎ.ಪಿ.ಎಂ.ಸಿ. ವತಿಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳು

692(845) ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ 1999-2000ನೇ ಸಾಲಿನಿಂದ ಈವರೆಗೆ ಎಪಿಎಂಸಿಗಳಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು?